## ಪ್ರಾರ್ಥನೆ

ಉಷಾ ಆ ಭಾಹಿ ಭಾನುನಾ ಚಂದ್ರೇಣ ದುಹಿತರ್ದಿವಃ ।
ಆವಹಂತೀ ಭೂರ್ಯಸ್ಮಭ್ಯಂ ಸೌಭಗಂ ವ್ಯುಚ್ಛಂತೀ ದಿವಿಷ್ಟಿಷು ॥
ಋಗ್ವೇದ, ೧.೪೮.೯

ಓ ಮುಂಜಾನೆಯ ಅಧಿದೇವತೆಯೆ! (ಉಷಾ), ತಂಪನ್ನು ನೀಡುವ ನಿನ್ನ ಪ್ರಭೆಯೊಂದಿಗೆ ಕೃಪೆಮಾಡಿ ಪ್ರತ್ಯಕ್ಷಳಾಗು. ದಿನದಿನವೂ ಕ್ಷೇಮವಾಗಿರುವಂತೆ ನಮಗೆ ಕರುಣಿಸು. ನಮ್ಮಲ್ಲಿ ಹಾಗೂ ಸುತ್ತಲೂ ಇರುವ ಅಂಧಕಾರವನ್ನು ದಯಮಾಡಿ ದೂರಮಾಡು.

ವಾಚಸ್ಪತಿಂ ವಿಶ್ವಕರ್ಮಾಣಮೂತರ್ಯೇ
ಮನೋಜುವಮ್ ವಾಜೇ ಅದ್ಯಾ ಹುವೇಮ ।
ಸ ನೋ ವಿಶ್ವಾನಿ ಹವನಾನಿ
ಜೋಷದ್ವಿಶ್ವ ಶಂಭೂರವಸೇ ಸಾಧುಕರ್ಮಾ ॥
ಋಗ್ವೇದ, ೧೦.೮೧.೭

ಈ ದಿನ, ಯಜ್ಞವನ್ನು ಪ್ರಾರಂಭಿಸುವ ಮುನ್ನ, ಪರಮ ಪುರುಷನಲ್ಲಿ (ವಿಶ್ವವನ್ನು ಸೃಷ್ಟಿಸಿದ ವಿಶ್ವಕರ್ಮ) ನಮ್ಮನ್ನು ಕಾಪಾಡೆಂದು ಶ್ರದ್ಧೆಯಿಂದ ಪ್ರಾರ್ಥಿಸುವೆವು. ಅವನೇ ಮಾತಿಗೆ ಒಡೆಯ (ವಾಚಸ್ಪತಿ). ನಮ್ಮ ಮನಸ್ಸುಗಳು ಅವನಲ್ಲಿ ನೆಲೆನಿಲ್ಲಲಿ. ಅವನೇ ಎಲ್ಲ ದಯೆಗೂ, ಕ್ಷೇಮಕ್ಕೂ ಮೂಲ. ಅವನ ಎಲ್ಲ ಕ್ರಿಯೆಗಳೂ ಅತ್ಯುತ್ತಮ, ಶುಭಕರ. ನಮ್ಮ ಯಜ್ಞಗಳ ಫಲಗಳನ್ನೆಲ್ಲ ಸ್ವೀಕರಿಸಿ, ನಮ್ಮನ್ನು ಸದಾ ಕಾಪಾಡು ಎಂದು ಅವನನ್ನು ಪ್ರಾರ್ಥಿಸುತ್ತೇವೆ.

ಅಂಬಿತಮೇ ನದೀತಮೇ ದೇವಿತಮೇ ಸರಸ್ವತಿ ।
ಅಪ್ರಶಸ್ತಾ ಇವ ಸ್ಮಸಿ ಪ್ರಶಸ್ತಿಮಂಬ ನಸ್ಕೃಧಿ ॥
ಋಗ್ವೇದ, ೨.೪೧.೧೬

ತಾಯಂದಿರ ತಾಯಿಯೆ, ನದಿಗಳಲ್ಲಿ ಅತ್ಯಂತ ಶ್ರೇಷ್ಠಳೇ, ದೇವತೆಗಳಲ್ಲಿ ಅತ್ಯಂತ ದಿವ್ಯಳಾದವಳೇ! ಓ ಸರಸ್ವತಿ! ಅಲ್ಪ ಕೀರ್ತಿಯುಳ್ಳವರಂತಿರುವ ನಮಗೆ ಅಧಿಕವಾದ ಪ್ರಶಂಸೆಯನ್ನು ದಯಪಾಲಿಸು.

---

## ಸೂಕ್ತಿಪ್ರಭ

- ಒಳ್ಳೆಯದು, ಕೆಟ್ಟದ್ದು ಎಂಬುದು ಯಾವುದೂ ಇಲ್ಲ. ನಮ್ಮ ಚಿಂತನೆ, ಭಾವನೆಗಳು ಅವನ್ನು ಹಾಗೆ ಮಾಡುತ್ತವೆ. —ವಿಲಿಯಂ ಶೇಕ್ಸ್‌ಪಿಯರ್
- ಜೀವನಕ್ಕೆ ಮತ್ತೊಂದು ಆವೃತ್ತಿಯೆಂದು ಏನಾದರೂ ಇದ್ದಿದ್ದರೆ, ನಾನು ಅದರಲ್ಲಿ ಏನೆಲ್ಲಾ ತಿದ್ದುಪಡಿಗಳನ್ನು ಮಾಡುತ್ತಿದ್ದೆನೋ! —ಜಾನ್ ಕ್ಲೇರ್
- ನಾನು ಸ್ವರ್ಗಕ್ಕೆ ಏರುವ ಮೊದಲು ನನ್ನ ಅಂತರಂಗದಲ್ಲಿ ಸ್ವರ್ಗವಿರಬೇಕು. —ಸ್ಟಾನ್‌ಫರ್ಡ್
- ಪ್ರೀತಿಸುವ ಧೈರ್ಯವಿರುವವನಿಗೆ ಕಷ್ಟಗಳನ್ನು ಸಹಿಸುವ ಧೈರ್ಯವೂ ಇರಬೇಕು. —ಆ್ಯಂಟನಿ ಟ್ರಾಲೋಪ್
- ಹಾಸ್ಯವನ್ನು ನೀಡುವ ನನ್ನ ವಿಧಾನವೆಂದರೆ ಸತ್ಯವನ್ನು ಹೇಳುವುದು. ಅದೇ ಜಗತ್ತಿನಲ್ಲಿ ಅತ್ಯಂತ ದೊಡ್ಡ ಹಾಸ್ಯ. —ಜಾರ್ಜ್ ಬರ್ನಾರ್ಡ್ ಷಾ
- ಯಾವುದನ್ನು ಉಪೇಕ್ಷಿಸಬೇಕು ಎಂದು ತಿಳಿಯುವ ಕಲೆಯೇ ಬುದ್ಧಿವಂತಿಕೆಯನ್ನು ಗಳಿಸುವ ವಿಧಾನ. —ವಿಲಿಯಂ ಜೇಮ್ಸ್
- ನಾವು ಸದಾ ಬದಲಾಗಬೇಕು, ಹೊಸದಾಗಬೇಕು, ಸಂಸ್ಕಾರಗೊಳ್ಳಬೇಕು. ಇಲ್ಲದಿದ್ದರೆ ಕಲ್ಲಾಗಿಬಿಡುತ್ತೇವೆ. —ಗಯಟೆ
- ನಿಮ್ಮ ಪಶ್ಚಾತ್ತಾಪವನ್ನು ತೀವ್ರಗೊಳಿಸಿ. ಆಳವಾಗಿ ಪಶ್ಚಾತ್ತಾಪ ಮೂಡಿದಾಗ ಮತ್ತೆ ಹೊಸ ಜೀವನ ಪ್ರಾರಂಭಿಸುವುದು. —ಎಚ್. ಡಿ. ಥೋರೋ
- ಇಂದಿನ ದಿನವೇ ನಮ್ಮದು. ನಿನ್ನೆಗೆ ನಾವು ಈಗಾಗಲೇ ಸತ್ತಿದ್ದೇವೆ; ನಾಳೆಗೆ ನಾವಿನ್ನೂ ಹುಟ್ಟಿಲ್ಲ. —ಜೆರಮಿ ಟೇಲರ್
- ನಾನು ನನ್ನ ಚಾರಿತ್ರ್ಯವನ್ನು ಕಾಪಾಡಿಕೊಂಡರೆ ಕೀರ್ತಿಯು ತನಗೆ ತಾನೇ ಲಭಿಸುತ್ತದೆ. —ಡಿ. ಎಲ್. ಮೂಡಿ
- ನನ್ನಲ್ಲಿ ಅಜ್ಞಾನವಿದೆ ಎಂದು ತಿಳಿಯುವುದೇ ಜಿಜ್ಞಾಸೆಯ ಮೊದಲ ಹೆಜ್ಜೆ. —ಬೆಂಜಮಿನ್ ದಿಸ್ರೇಲಿ
- ಸುಖವೆನ್ನುವುದು ನಾವು ತಲುಪುವ ಒಂದು ನಿರ್ದಿಷ್ಟ ಊರಲ್ಲ; ಪ್ರಯಾಣದ ಮಾರ್ಗವಷ್ಟೇ. —ಮಾರ್ಗರೆಟ್ ಲೀ ರನ್‌ಬೆಕ್